ISBN : 978-93-92427-02-2

# ಬುದ್ಧ ಹಾಗೂ ಬಸವಣ್ಣನವರ ಚಿಂತನೆಗಳು

– ಡಾ. ರಾಜಶೇಖರ ಎಸ್. ದಾನರಡ್ಡಿ ಸಹಾಯಕ ಕನ್ನಡ ಪ್ರಾಧ್ಯಾಪಕರು ಪಂಡಿತ ಪಂಚಾಕ್ಷರಿ ಗವಾಯಿಗಳವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಗದಗ

**1. ಬುದ್ಧನ ಬೋಧೆಗಳು :**

ಇಂದಿನ ಬಿಹಾರದಲ್ಲಿಯ ಕಪಿಲ ವಸ್ತುವಿನ ಯುವರಾಜ ಸಿದ್ಧಾರ್ಥ ಒಂದು ದಿನ ಮಧ್ಯರಾತ್ರಿಯಲ್ಲಿ ಅರಮನೆಯನ್ನು ಬಿಟ್ಟು ಹೊರಟು ಮನೆಯೇ ಇಲ್ಲದವನಾದ. ಸಿದ್ಧಾರ್ಥ ಬುದ್ಧನಾದ, ಕತ್ತಲೆಯಲ್ಲಿದ್ದ ಬುದ್ಧನಿಗೆ ಕತ್ತಲೆಯಲ್ಲಿಯೇ ಬೆಳಕು ಕಾಣಿಸಿ ಬುದ್ಧ ಪ್ರಬುದ್ಧನಾದನು. ಹೃದಯದಲ್ಲಿ ಸತ್ಯ ಇದ್ದರೆ ಚಾರಿತ್ರ್ಯದಲ್ಲಿ ಸುಂದರತೆ ಇರುತ್ತದೆ. ಚಾರಿತ್ರ್ಯದಲ್ಲಿ ಸುಂದರತೆ ಇದ್ದರೆ ಮನೆಯಲ್ಲಿ ಸೌಹಾರ್ದತೆ ಇರುತ್ತದೆ. ಮನೆಯಲ್ಲಿ ಸೌಹಾರ್ದತೆ ಇದ್ದರೆ ದೇಶದಲ್ಲಿ ಸುಭಿಕ್ಷೆ ಇರುತ್ತದೆ. ದೇಶದಲ್ಲಿ ಸುಭಿಕ್ಷೆ ಇದ್ದರೆ, ಜಗತ್ತಿನಲ್ಲಿ ಶಾಂತಿ ನೆಲೆಸುತ್ತದೆ" ಎಂದವನು ಬುದ್ಧದೇವ. ಆಗಲೂ ಎಂದಿನಂತೆ ಜನರು ಬುದ್ಧನನ್ನು ಟೀಕಿಸಿದರು. ಆಗ ಬುದ್ಧ ನಸುನಕ್ಕ ಆ ನಗೆಯಲ್ಲಿ ನಿಮಗೆ ಕನಿಷ್ಠ ಪಕ್ಷ ನಾಲ್ಕು ಜನ ಟೀಕಾರರು ಇಲ್ಲವೆಂದರೆ ನಿಮ್ಮ ಜೀವನ ನಿರರ್ಥಕ ಎಂಬುದಾಗಿತ್ತು. ಈ ಮಹಾಪುರುಷ ಹುಟ್ಟಿದ್ದು, ಜ್ಞಾನ ಪಡೆದದ್ದು, ಮೋಕ್ಷ ಹೊಂದಿದ್ದು ವೈಶಾಖ ಶುದ್ಧ ಪೂರ್ಣಿಮೆಯ ದಿನದಂದೇ ಆದ್ದರಿಂದ ಈ ಹುಣ್ಣಿಮೆಯು ಬುದ್ಧಪೂರ್ಣಿಮೆ ಎಂದು ಪವಿತ್ರ ದಿನವಾಗಿದೆ. ಸಿದ್ಧಾರ್ಥ ಬುದ್ಧನಾದಾಗ ತನ್ನ ಮಲತಾಯಿಯ ಹೆಸರನ್ನು ತನ್ನ ಹೆಸರಿಗೆ ಸೇರಿಸಿಕೊಂಡು ಗೌತಮ ಬುದ್ಧನೆಂದು ವಿಶ್ವಮಾನವನಾಗಿ ಸತ್ಯ, ಅಹಿಂಸೆ, ಸಮಾನತೆ ಎಂಬ ಮೂರು ತತ್ವಗಳನ್ನು ವಿಶ್ವಕ್ಕೆ ಕಾಣಿಕೆಯಾಗಿ ಕೊಟ್ಟನು. ಎಲ್ಲರನ್ನೂ ತನ್ನತ್ತ ಆಕರ್ಷಿಸುವ ಮೇಧಾವಿಶಕ್ತಿ ಇವನಲ್ಲಿ ಇತ್ತು. ಅದ್ದರಿಂದಲೇ ಇವನನ್ನು ಏಷ್ಯಾದ ಬೆಳಕು ಎಂದು ಕರೆಯುವರು.

**ಜನನ ಮತ್ತು ಬಾಲ್ಯಜೀವನ :**

ಗೌತಮ ಬುದ್ಧನ ಮೊದಲ ಹೆಸರು ಸಿದ್ಧಾರ್ಥ. ಸಿದ್ಧಾರ್ಥನು ಕ್ರಿ.ಪೂ. 563 ರಲ್ಲಿ (ಇಂದಿನ ಬಿಹಾರ) ಕಪಿಲ ವಸ್ತುವಿನ ಶಾಕ್ಯವಂಶದ ರಾಜ ಶುದ್ಧೋದನ ಮತ್ತು ಮಾಯಾದೇವಿ ಎಂಬ ದಂಪತಿಗಳಿಗೆ ರಾಜ ಕುಟುಂಬದಲ್ಲಿ ವೈಶಾಖ ಶುದ್ಧ ಪೂರ್ಣಿಮೆಯ ದಿನ ಜನಿಸಿದನು. ಇವನ ತಾಯಿ ಮಾಯಾದೇವಿ ತನ್ನ ತವರುಮನೆ ನೇಪಾಳದ ಲುಂಬಿಣಿಗೆ ಪ್ರಯಾಣ ಮಾಡುವಾಗ ಮಾರ್ಗಮಧ್ಯದಲ್ಲಿಯೇ ಸಿದ್ಧಾರ್ಥನಿಗೆ ಜನ್ಮ ನೀಡಿದಳು. ಸಿದ್ಧಾರ್ಥ ಏಳು ದಿನದ ಮಗುವಿದ್ದಾಗಲೇ ತಾಯಿ ಮರಣ ಹೊಂದಿದಳು. ಬುದ್ಧನ ಮಲತಾಯಿ ಪ್ರಜಾಪತಿಗೌತಮಿಯ ಆಶ್ರಯದಲ್ಲಿ ಬೆಳೆದು ದೊಡ್ಡವನಾದ. ಬುದ್ಧನಾದ ಮೇಲೆ ತನ್ನ ತಾಯಿಯನ್ನು ಮರೆಯದೆ ಅವಳ ಹೆಸರನ್ನು ತನ್ನ ಹೆಸರಿಗೆ ಸೇರಿಸಿಕೊಂಡು ಗೌತಮ ಬುದ್ಧನಾದನು. ಸಿದ್ಧಾರ್ಥನಿಗೆ 16 ನೇ ವಯಸ್ಸಿನಲ್ಲಿ ಯಶೋಧರಾ ಎಂಬುವಳೊಂದಿಗೆ ವಿವಾಹವಾಯಿತು. 'ರಾಹುಲ' ಎಂಬ ಮಗ ಜನಿಸಿದನು.

ಸಿದ್ಧಾರ್ಥನ ಸಂಸಾರಿಕ ಜೀವನದಲ್ಲಿ ಅನಿರೀಕ್ಷಿತ ಘಟನೆಯಿಂದ ಲೌಕಿಕ ಬದುಕಿನಲ್ಲಿ ಸುಖ ಭೋಗಗಳು ಅವನಿಗೆ ತೃಪ್ತಿ ಕೊಡಲಿಲ್ಲ, ಲೌಕಿಕ ಸುಖವೆಲ್ಲ ನಶ್ವರವೆಂದು ತಿಳಿದು ಶಾಶ್ವತ ಸುಖ ಶೋಧನೆಗಾಗಿ ಒಂದು ದಿನ ಮಧ್ಯ ರಾತ್ರಿಯಲ್ಲಿ ತನ್ನ ಮಲತಾಯಿ, ಪತ್ನಿ, ಆರು ದಿನಗಳ ಮಗ ರಾಹುಲ, ರಾಜ್ಯ, ಕೋಶ, ಗೆಳೆಯ ಸೇವಕ ಆನಂದ ಎಲ್ಲರನ್ನು ಎಲ್ಲವನ್ನು ಬಿಟ್ಟು ಅರಮನೆಯಿಂದ ಅರುವಿನ ಮನೆಯತ್ತ ಹೊರಟು ಬಿಟ್ಟನು. ಇದನ್ನು 'ಮಹಾಪರಿತ್ಯಾಗ' ಎನ್ನುವರು. ಅರಮನೆಯಲ್ಲಿದ್ದ ಸಿದ್ಧಾರ್ಥ ಕಾಡಿನಲ್ಲಿ ಮನೆಯಿಲ್ಲದವನಾದನು.

**ಸತ್ಯಾನ್ವೇಷಣೆ :**

ಮಹಾವೀರನಂತೆ ದೇಹವನ್ನು ದಂಡಿಸಿ ಸತ್ಯಾನ್ವೇಷಣೆಯಲ್ಲಿ ತೊಡಗಿದನು. ಜನರಿಂದ ಅನೇಕ ಕಷ್ಟಗಳನ್ನು ಅಪಮಾನವನ್ನು ಅನುಭವಿಸಬೇಕಾಯಿತು. ಉರುವೇಲು ಎಂಬ ಗ್ರಾಮದ ಹತ್ತಿರ ದಾರಿಯಲ್ಲಿದ್ದ ನಿರಂಜನ ನದಿಯನ್ನು ದಾಟುವಾಗ ಉಪವಾಸದಿಂದ ಬಳಲುತ್ತಿದ್ದ ಸಿದ್ಧಾರ್ಥನಿಗೆ ನಿಲ್ಲುವ ಶಕ್ತಿಯಿಲ್ಲದೆ ನದಿಯಲ್ಲಿ ಸ್ನಾನ ಮಾಡಿ ದಂಡೆಯ ಮೇಲಿದ್ದ ಅಶ್ವತ್ಥ ವೃಕ್ಷದ ಬಳಿ ನಿತ್ರಾಣನಾಗಿ ಮಲಗಿ ಬಿಟ್ಟನು. ಅಲ್ಲಿಯ ಅರಸನ ಮಗಳಾದ ಸುಜಾತ ಎಂಬುವವಳು ಅಶ್ವತ್ಥ ವೃಕ್ಷದ ಬಳಿ ಇದ್ದ ಈ ಆಕರ್ಷಕ ವ್ಯಕ್ತಿಯನ್ನು ನೋಡಿ ಇವನಿಗೆ ಭಿಕ್ಷಾನ್ನವನ್ನು ಕೊಟ್ಟಳು. ಆಗ ಸಿದ್ಧಾರ್ಥನಿಗೆ ಹಸಿವಿನ ಅರ್ಥವಾಯಿತು. ದೇಹವನ್ನು ದಂಡಿಸುವುದರಲ್ಲಿ ಪ್ರಯೋಜನವಿಲ್ಲ. ದೇಹ ಆರೋಗ್ಯವಾಗಿದ್ದರೆ ಮಾತ್ರ ಗುರಿ ಸಾಧಿಸಲು ಸಾಧ್ಯ ಎಂದು ತಿಳಿದು ಗಯಾದ ಸಮೀಪ ಅರಳಿ ವೃಕ್ಷದ ಕೆಳಗೆ 47 ದಿನಗಳ ಕಾಲ ಧ್ಯಾನಾಸಕ್ತನಾಗಿ ಕುಳಿತನು. ಕತ್ತಲಲ್ಲಿದ್ದ ಸಿದ್ಧಾರ್ಥನಿಗೆ ಕತ್ತಲೆಯಲ್ಲಿಯೇ ಬೆಳಕು ಕಾಣಿಸಿತು. ಸಿದ್ಧಾರ್ಥ ಬುದ್ಧನಾದನು. 'ಬುದ್ಧ' ಎಂದರೆ ಅರಿವು ಆಳವಾದ ತಿಳುವಳಿಕೆ ಪಡೆದವನು, ಬೆಳಕನ್ನು ಕಂಡವನು, ಎಂದರ್ಥ. ಬುದ್ಧನು ವೈಶಾಖ ಶುದ್ಧ ಪೂರ್ಣಿಮೆಯ ದಿನವೇ ಮಹಾಜ್ಞಾನಿಯಾಗಿ ವಿಶ್ವಕ್ಕೆ ಬೆಳಕು ತೋರಿಸಿದನು. ಬುದ್ಧನಿಗೆ ಜ್ಞಾನೋದಯವಾದ ಗಯಾ ಬುದ್ಧಗಯಾ ಎಂದು ಪವಿತ್ರ ಕ್ಷೇತ್ರವಾಯಿತು. ಅರಳಿ ವೃಕ್ಷವು ಮಹಾಬೋಧಿ ವೃಕ್ಷವಾಗಿ ಇಂದಿಗೂ ಪವಿತ್ರವೃಕ್ಷ ಎಂದು ಪೂಜಿಸಲ್ಪಡುತ್ತಿದೆ.

ಬುದ್ಧನು ತನ್ನ ಮೊದಲ ಪ್ರವಚನವನ್ನು ಸಾರಾನಾಥದ ಜಿಂಕೆ ವನದಿಂದ ಪ್ರಾರಂಭಿಸಿದನು 'ಆನಂದ' ಎಂಬುವನು ಇವನ ಮೊದಲಶಿಷ್ಯ. ನಂತರ ಕಾಶಿ, ಸಾರನಾಥ, ರಾಜಗೃಹ, ಕೌಶಾಂಬಿ, ಮಗಧ, ಕೋಸಲ, ಅಂಗ, ಮಿಥಿಲ, ಕಪಿಲವಸ್ತು ಮುಂತಾದ ಸ್ಥಳಗಳಲ್ಲಿ ಬೋಧನೆ ಮಾಡಿದನು. ಅಲ್ಲಿ ಅನೇಕ ಬೌದ್ಧ ಸಂಘಗಳನ್ನು ಸ್ಥಾಪಿಸಿದನು.

ಬುದ್ಧನ ಸಂದೇಶಗಳು :

ಜೀವನವು ದುಃಖಮಯವಾಗಿದೆ. ಆಸೆಯೇ ದುಃಖಕ್ಕೆ ಕಾರಣ. ಆಸೆಯಿಂದ ಹೊರಬರಲು ಬುದ್ಧನು ಅನೇಕ ಮಾರ್ಗಗಳನ್ನು ಬೋಧಿಸಿದನು. ಅವುಗಳನ್ನು 'ಬುದ್ಧವಚನ' ಎನ್ನುವರು. ಇವುಗಳನ್ನು ತ್ರಿಪೀಟಕ ಎಂದೂ ಸಹ ಕರೆಯುವರು. 1. ವಿನಯ ಪೀಟಕದಲ್ಲಿ ಬೌದ್ಧ ಭಿಕ್ಷುಗಳು ಅನುಸರಿಸುವ ನಿಯಮಗಳಿವೆ. 2. ಸುತ್ತ ಪೀಟಕದಲ್ಲಿ ಬುದ್ಧನ ಜೀವನ ಹಾಗೂ ಬೋಧನೆಗಳಿವೆ. 3. ಅಭಿಧಮ್ಮ ಪೀಟಕದಲ್ಲಿ ಬೌದ್ಧಧರ್ಮದ ತತ್ವಗಳಿವೆ. ತ್ರಿಪೀಟಕಗಳನ್ನು ತ್ರಿರತ್ನಗಳೆಂದು ಕರೆಯುವರು.

ಬುದ್ಧನು ನಾಲ್ಕು ಆರ್ಯ ಸತ್ಯಗಳನ್ನು ಬೋಧಿಸಿದನು. 1. ಜೀವನವು ದುಃಖಮಯವಾಗಿದೆ. 2. ಆಸೆಯೇ ದುಃಖಕ್ಕೆ ಕಾರಣ. 3. ಆಸೆಯನ್ನು ನಿಯಂತ್ರಿಸುವದರಿಂದ ದುಃಖದಿಂದ ಪಾರಾಗಲು ಸಾಧ್ಯ, 4. ಆಸೆಯನ್ನು ನಿಯಂತ್ರಿಸಲು ಎಂಟು ಮಾರ್ಗಗಳನ್ನು ಅನುಸರಿಸಬೇಕು ಎಂದನು.

ಬುದ್ಧನು ಜೀವನಕ್ಕೆ ಬೇಕಾದ ಬೆಳಕನ್ನು ತೋರಿಸಿದನು. ಧರ್ಮಗಳಿಗೆಲ್ಲ ಮನುಷ್ಯನ ಮನಸ್ಸೆ ಬಹಳ ಮುಖ್ಯ. ಒಬ್ಬನು ಅಶುದ್ಧ ಮನಸ್ಸಿನಿಂದ ಮಾತನಾಡಿದರೆ ಅಥವಾ ಅಶುದ್ಧವಾದ ಕಾರ್ಯ ಮಾಡಿದರೆ ದುಃಖವು ಅವನನ್ನು ಹಿಂಬಾಲಿಸುತ್ತದೆ. ಆದ್ದರಿಂದ ನಾವು ಸದಾಕಾಲ ಎಚ್ಚರದಲ್ಲಿರಬೇಕು. ಎಚ್ಚರವನ್ನು ತಪ್ಪಬಾರದು ಎಂದು ಪ್ರತಿಪಾದಿಸಿದನು. ಪಾಪದ ರಾಶಿಯೇ ದುಃಖ ಎಂದನು. ಬೇರೆಯವರನ್ನು ತನ್ನಂತೆ ಎಂದು ಭಾವಿಸಬೇಕು. ಯಾರನ್ನು ಹಿಂಸಿಸಬಾರದು ಎಂದನು. ಕಾಮದಿಂದ ಶೋಕ ಹುಟ್ಟುತ್ತದೆ. ಭಯ ಹುಟ್ಟುತ್ತದೆ. ಆದ್ದರಿಂದ ಕಾಮದಿಂದ ವಿಮುಕ್ತನಾದವನಿಗೆ ಯಾವಶೋಕ ಇರುವದಿಲ್ಲ. ಮಾಡಬೇಕಾದದ್ದು ಏನೇ ಇದ್ದರೂ ಅದನ್ನು ಶ್ರದ್ಧೆಯಿಂದ ಮಾಡಬೇಕು ಎಂದು ಬೋಧಿಸಿದನು. ಸತ್ಯ, ಅಹಿಂಸೆ, ಸಮಾನತೆ, ಇವುಗಳನ್ನು ಜಗತ್ತಿಗೆ ಮೊಟ್ಟಮೊದಲು ಕಾಣಿಕೆಯಾಗಿ ನೀಡಿದವನು ಭಗವಾನ್ ಬುದ್ಧದೇವನು. ಬುದ್ಧನ ಅಹಿಂಸಾತತ್ವವು ಬಹಳ ಜನಪ್ರಿಯವಾಯಿತು. ಇವನ ಪ್ರಭಾವದಿಂದ ಅನೇಕ ಮಾಂಸಾಹಾರಿಗಳು ಸಸ್ಯಾಹಾರಿಗಳಾದರು. ಸಮಾನತೆ ಸಹೋದರತ್ವದ ಕಲ್ಪನೆಯು ಮುಂದೆ ಅಂತರರಾಷ್ಟ್ರೀಯ ಸ್ನೇಹಕ್ಕೆ ಕಾರಣವಾಯಿತು. ಇಂತ 'ಉದಾತ್ತ ವಿಚಾರಗಳಿಂದ ಬೌದ್ಧ ಧರ್ಮವು ಎಲ್ಲ ಜನರಿಗೂ ಆಕರ್ಷಣೆಯಾಯಿತು. ಬೌದ್ಧಧರ್ಮವು ಜಾತಿ ಭೇಧವಿಲ್ಲದೆ ಎಲ್ಲ ಜಾತಿಯವರಿಗೂ ತನ್ನ ಬಾಗಿಲನ್ನು ತೆರೆಯಿತು. ಬುದ್ಧನ' ದಯೆ, ಪ್ರೀತಿ, ವಾತ್ಸಲ್ಯದ ಜೀವನ ನಡೆಸುವಂತೆ ಕರೆ ನೀಡಿದನು. ಸರಳವಾದ ನೈತಿಕ ಹಾಗೂ ಪರಿಶುದ್ಧ ಜೀವನ ನಡೆಸುವದರಿಂದ ಶಾಂತಿ ಸಿಗುತ್ತದೆಂದು ಪ್ರತಿಪಾದಿಸಿದನು. ಇದೇ ಮುಕ್ತಿಗೆ ಮಾರ್ಗಎಂದನು.

II. ಬಸವಣ್ಣನವರ ವಿಚಾರಧಾರೆಗಳು :

ಹನ್ನೆರಡನೆ ಶತಮಾನದ ಅಂಧಕಾರದಲ್ಲಿ ಮೂಡಿಬಂದ ಸೂರ್ಯ ಶ್ರೀ ಬಸವಣ್ಣನವರು. ದೈವಿ ಸಂಭೂತರು ಕೈಗೊಳ್ಳುವ ಧರ್ಮ ಸಂಸ್ಥಾಪನೆ, ಸಮಾಜೋದ್ಧಾರ ಆತ್ಮ ಸಂಸ್ಕಾರಗಳಂತ ಕಾಯಕಗಳಿಗೆ ಬಸವಣ್ಣನರ ಜೀವನ ಒಂದು ನಿದರ್ಶನ. ಬಸವಣ್ಣನವರಿಂದ ಭಾರತದ ಆಧ್ಯಾತ್ಮಿಕ ಜ್ಞಾನ ಭಂಡಾರ ಸಮೃದ್ಧವಾಗಿದ್ದರಿಂದ ಕರ್ನಾಟಕದಲ್ಲಿ ನವಯುಗ ಪ್ರಾರಂಭವಾಯಿತು. ಅಜ್ಞಾನದಿಂದ ಬೇಸತ್ತ ಜನ ಸಾಮಾನ್ಯರನ್ನು ಜ್ಞಾನದ ಬೆಳಕಿನತ್ತ ಸಾಗಿಸಿದ ಮಹಾ ಜ್ಯೋತಿ ಬಸವಣ್ಣನವರು.

ಬಸವಣ್ಣನವರದು ಬಹು ಆಯಾಮದ ವ್ಯಕ್ತಿತ್ವ ಇವರ ಬದುಕನ್ನು ಯಾವ ದೃಷ್ಟಿಯಿಂದ ನೋಡಬೇಕು ಎಂಬುದು ಅವರ ವ್ಯಕ್ತಿತ್ವ ಕೃತಿತ್ವದ ಅರಿವಿರುವವರಿಗೆ ಒಂದು ಸವಾಲು, ಏಕೆಂದರೆ ಯಾವ ದೃಷ್ಟಿಯಿಂದ ನೋಡಿದರೂ ಅವರ ಬದುಕು ಮಧುರ ಆಖ್ಯಾನ, ಮುಟ್ಟಿಕ್ಕಿಟ್ಟ ಚಿನ್ನ, ಭಕ್ತರಾಗಿ ಭಕ್ತಿ ಭಂಡಾರಿ, ಅನುಭಾವಿಯಾಗಿ ಸಾಧನೆಯ ಉತ್ತುಂಗ ಸ್ಥಿತಿಯನ್ನು ತಲುಪಿದ ಅನನ್ಯ ಸಾಧಕ. ಆತ್ಮ ಪರಮಾತ್ಮ ಜಗತ್ತು ಮಾಯೆ ಮೋಕ್ಷವನ್ನು ಕುರಿತಂತೆ ಪ್ರಾಂಜಲ ಚಿಂತನೆಯಿಂದ ಅವುಗಳನ್ನು ವಾಸ್ತವವಾದಿ ನೆಲೆಗಟ್ಟಿನ ಮೇಲೆ ಅರ್ಥೈಸಿದ ದಾರ್ಶನಿಕ. ಎಂಟುನೂರ ಐವತ್ತು ವರ್ಷಗಳ ಹಿಂದೆ ಸಮಾಜದಲ್ಲಿ ತಾಂಡವ ವಾಡುತ್ತಿದ್ದ ಜಾತಿ ಪದ್ಧತಿಯ ರಾಕ್ಷಸಿ ಪ್ರವೃತ್ತಿಯನ್ನು ನಿರ್ಮೂಲನೆ ಮಾಡಲು ಬಸವಣ್ಣನವರು ಕೈಗೊಂಡ ಕ್ರಮಗಳು, ಸಮಾನತೆಯ ಸಮಾಜದ ನಿರ್ಮಿತಿಗಾಗಿ ಅವರು ಕೊಟ್ಟ ಲಿಂಗದೀಕ್ಷೆ, ಯಾವುದೆ ಕಾಯಕವನ್ನು ಹೀಗಳೆಯದೆ ಮಾಡುವ ಪ್ರತಿಯೊಂದು ಕಾಯಕಕ್ಕೂ ನೀಡಿದ ಮಹತ್ವ ಮತ್ತು ಅದರಲ್ಲೇ ಕೈಲಾಸವನ್ನು ಕಂಡುಕೊಳ್ಳಬೇಕೆಂಬ ಚಿಂತನೆ, ಹೆಣ್ಣಿನ ಬಗ್ಗೆ ತೋರಿದ ಆದರ ಮತ್ತು ನೀಡಿದ ಸ್ಥಾನಮಾನ, ಮಂದಿರ ಸಂಸ್ಕೃತಿ ಮತ್ತು ಢಂಬಾಚಾರಗಳನ್ನು ಖಂಡಿಸಿ, ತನ್ನ ದೇಹದಲ್ಲಿ ಇರುವ ದೇವನನ್ನು ಕಾಣಬೇಕೆಂದು ಅದಕ್ಕಾಗಿ ಆಚಾರಗಳು ಬೇಡವೆಂದು ವಿಚಾರವಂತರಾಗಬೇಕೆಂದು ಹೇಳಿದ ಮಾತುಗಳು ಯುಗಯುಗಗಳವರೆಗೂ ಮನುಕುಲವನ್ನು ಬೆಳಕಿನತ್ತ ಕೊಂಡೊಯ್ಯುವ ದೀವಟಿಗೆಗಳು. ಬಸವಣ್ಣನವರ ಪ್ರಾಸಂಗಿಕತೆ ಇಂದಿಗೂ ಉಳಿದಿರುವುದು ಅವರ ಸಮಾಜೋನ್ಮುಖಿಯಾದ ಚಿಂತನೆಯಿಂದ, ಕಾಯಕಕ್ಕೆ ಕೊಟ್ಟ ಮಹತ್ವದಿಂದ ಜಗತ್ತನ್ನು ನಿರಾಕರಿಸದೆ ಇದನ್ನು ಸತ್ಯವೆಂದು 'ಕಮ್ಮಟ'ವೆಂದು ಹೇಳಿ ಇಲ್ಲಿ ಬಾಳಲು ಕೊಟ್ಟ ಸ್ಫೂರ್ತಿಯಿಂದ ಎನ್ನಬಹುದು.

ಬಸವಣ್ಣನವರು ಆಡಳಿತ ನಡೆಸಿದಂತ ರೀತಿ ಸಹ ಇಂದಿನ ಅಧಿಕಾರಸ್ಥರಿಗೆ ಪ್ರಾಸಂಗಿಕವಾಗಿದೆ. ಅವರು ಉನ್ನತ ಅಧಿಕಾರದಲ್ಲಿದ್ದು ಹಣದ ವಹಿವಾಟನ್ನು ನೋಡಿಕೊಂಡು ರಾಜ್ಯವನ್ನು ನಡೆಸುವಂಥ ಸ್ಥಾನದಲ್ಲಿದ್ದವರು. ಅಂಥ ಸ್ಥಾನದಲ್ಲಿದ್ದುಕೊಂಡು ನಿಸ್ಪಹ ಹಾಗೂ ಪ್ರಾಮಾಣಿಕ ಬದುಕಲ್ಲಿ ಬಾಳಿದವರು. ಬಸವಣ್ಣನವರ ಕಾಲದಲ್ಲಿಯೂ ಕುಹಕಿಗಳಿದ್ದರು. ಸಣ್ಣ ಜನರಿದ್ದರು. ಇವತ್ತಿನಂತೆ ಅವತ್ತೂ ಆರೋಪಗಳಿರುತ್ತಿದ್ದವು. ಅವಕ್ಕೆ ಪ್ರಸ್ತುತವಾಗಿ ಬಸವೇಶ್ವರರು ಕೊಟ್ಟಂಥ ಉತ್ತರಗಳು "ಹೊನ್ನಿನೊಳಗೊಂದೊರೆಯ, ಸೀರೆಯೊಳಗೊಂದೆಳೆಯ, ಇಂದಿಂಗೆ ನಾಳಿಂಗೆ ಬೇಕೆಂದೆನಾದಡೆ, ನಿಮ್ಮಾಣೆ ನಿಮ್ಮ ಪ್ರಮಥರಾಣೆ' ಹಾಗೂ ಊರ ಮುಂದೆ ಹಾಲ ಹಳ್ಳಹರಿವುತಿರಲು, ಒರೆಯಾವಿನ ಬೆನ್ನ ಹರಿಯಲದೇಕಯ್ಯ?.... ಲಜ್ಜೆಗೆಡಲೇಕೆ? ನಾಣುಗೆಡವೇಕೆ? ಕೂಡಲ ಸಂಗಮದೇವಯ್ಯನುಳ್ಳನ್ನಕ್ಕ

 ISBN : 978-93-92427-02-2

ಬಿಜ್ಜಳನ ಭಂಡಾರವೆನಗೇಕಯ್ಯಾ" ಸಾಮಾನ್ಯನಾ ಕೊಡುವಂಥ ಉತ್ತರಗಳಾಗಿಲ್ಲ. ಇಂಥ ಉತ್ತರಗಳನ್ನು ಕೊಡಲು ಎಂಟೆದೆಗಳು ಬೇಕು. ಇವತ್ತು ಇಂಥ ಜನರೆಲ್ಲಿದ್ದಾರೆ.

ಬಸವಣ್ಣನವರು ಭೂಮ ವ್ಯಕ್ತಿತ್ವದ ಘನಪುರುಷರು. 'ಲಾಂಛನಕ್ಕೆ ಶರಣು' ಎಂದು ಹೇಳಿದರೆ ಹೊರತಾಗಿ ಶರಣನಿಗೆ ಪಾತ್ರನಾದವನ ಅಂತರಂಗವನ್ನು ಶೋಧಿಸಿ ನೋಡಲು ಬಯಸಲಿಲ್ಲ. ಅವರ ಯಾವುದೇ ವಚನದಲ್ಲಾಗಲಿ ತಿಳಿಮನಸ್ಸು, ಸ್ವಸ್ಥಚಿಂತನ ಹೆಪ್ಪುಗಟ್ಟಿರುವುದನ್ನು ಕಾಣಬಹುದಾಗಿದ್ದು, ಈ ಕಾರಣದಿಂದಾಗಿಯೇ ಅವರು ನುಡಿದದ್ದು 'ಮುತ್ತಿನಹಾರ' 'ಮಾಣಿಕ್ಯದ ದೀಪ್ತಿ' ಸ್ಫಟಿಕದ ಸಲಾಕೆ'ಯಾಗಿದೆ ಬಸವ ಚಿಂತನೆಯ ಪರಿಮಳ ಅವರ ಒಂದೊಂದು ಶಬ್ದದಲ್ಲೂ ಘಮಘಮಿಸುತ್ತಿದೆ. ಬಸವನಾಮಸ್ಮರಣೆ ಮಾಡಿಕೊಳ್ಳುವದೆಂದರೆ ಪಾವನ ತೀರ್ಥದಲ್ಲಿ ಮಿಂದಷ್ಟು ಪುಣ್ಯ, ಧನ್ಯತೆಯು ಅನುಭವವಾಗುತ್ತದೆ. ಇನ್ನು ಆ ತತ್ವಗಳನ್ನು ಆಚರಣೆಗೆ ತಂದು ಬದುಕಿನಲ್ಲಿ ಸಾಕಾರಗೊಳಿಸಿಕೊಂಡರೆ ಸಿಗಬಹುದಾದ ಸುಖ-ನೆಮ್ಮದಿ-ಶಾಂತಿಗೆ ಎಣೆಯಲ್ಲಿ? ದೇವರು ಮತ್ತು ಜಗತ್ತನ್ನು ಕುರಿತಂತೆ ಬಸವಣ್ಣನವರ ಚಿಂತನೆ ಹೇಗಿತ್ತೆಂದರೆ ದೇವರು ಅವತಾರ ವಾದಿಯಲ್ಲ, ಅಂತರ್ಯಾಮಿ, ಘಟಘಟವಾಸಿ ಎಂದರು. ಅದು ಅಲಖ, ಅನಂತ, ಅವಿನಾಶಿ ಎಂದರು. ಹೀಗೆ ಪರಮಾತ್ಮನನ್ನು ಈ ದೇಹದಲ್ಲಿ ಈ ಪ್ರಕೃತಿಯಲ್ಲಿ ಕಾಣುವ ಬಸವೇಶ್ವರರು ಆ ಪರತತ್ವವನ್ನು 'ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ', ಎತ್ತೆತ್ತ ನೋಡಿದತ್ತತ್ತ ನೀನೆ ದೇವಾ ಸಕಲ ವಿಸ್ತಾರದ ರೂಹು ನೀನೆ ದೇವಾ' 'ನನೆಯೊಳಗಣ ಪರಿಮಳ' 'ಕನ್ಯೆಯ ಸ್ನೇಹ' ಸ್ವರ್ಗಮರ್ತ್ಯ ಪಾತಾಳದೊಳಗೆ ಒಬ್ಬನೇದೇವ' ಎಂದೆಲ್ಲ ಪರಿಭಾವಿಸಿದರು. ಅಂತೆಯೇ ಆತ್ಮ ಪರಮಾತ್ಮನ ಅಂಶವೆಂದು ಹೇಳಿದರು. ಬಸವಣ್ಣನವರು ಪ್ರತಿಪಾದಿಸಿದ ನಿರ್ಗುಣ ತತ್ವಕ್ಕೆ ಗುಡಿ-ಗುಂಡಾರಗಳ ಹಂಗಿಲ್ಲ. ಏಕೆಂದರೆ ಪರಮಾತ್ಮ ಭಕ್ತನ ಅಂಗೈಯಲ್ಲಿ ಚುಳುಕಾಗಿ ನೆಲೆಸಿದ್ದಾನೆ. ಬಸವಣ್ಣನವರು ಜಗತ್ತನ್ನು 'ಕರ್ತಾರನ ಕಮ್ಮಟ' ಎಂದಿರುವುದು ಜಗತ್ತಿನ ಅತ್ಯಂತ ಸೂಕ್ತವಾದ ವಿಶ್ಲೇಷಣೆಯಾಗಿದೆ. ಮರ್ತ್ಯಲೋಕವೆಂಬುದು ಕರ್ತಾರ ಕಮ್ಮಟವಯ್ಯ ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯ ಎಂದು ಹೇಳುವುದರ ಮೂಲಕ ಕರ್ತಾರ ಮೇಲಿದ್ದಾನೆ. ಅವನ ಕಮ್ಮಟ ಈ ಜಗತ್ತು. ಬಸವಣ್ಣನವರ ದೃಷ್ಟಿಯಲ್ಲಿ ಈ ಜಗತ್ತು ಪರಮಾತ್ಮನ ಸೃಷ್ಟಿ ಇದು ಸತ್ಯ. ಇದು 'ಕರ್ತಾರನ ಕಮ್ಮಟ' ಎಂದು ಹೇಳಿರುವುದು ಅವರ ಮನೋಜ್ಞ ಕಲ್ಪನೆಗೆ ಉದಾಹರಣೆಯಾಗಿದೆ.

ಬಸವಣ್ಣನವರು ಇದ್ದ ಸಮಾಜ ಅಸಾಂಗತ್ಯಗಳಿಂದ ಕೂಡಿತ್ತು. ಜಾತಿ ಭೂತದ ಅಪ್ಪುಗೆಯಲ್ಲಿ ತತ್ತರಿಸಿ ಹೋಗಿದ್ದ ವ್ಯವಸ್ಥೆಗೆ ಹೊಸ ಅರ್ಥವಿನ್ಯಾಸಗಳನ್ನು ಕೊಡಲು ಬಸವಣ್ಣನವರು ನಡೆಸಿದ ಹೋರಾಟ ಭಾರತೀಯ ಇತಿಹಾಸ ಮರೆಯಲಾಗದಂಥದ್ದು. ಜಾತಿಗಳ ಮಧ್ಯೆ ಇದ್ದ ಕಂದಕಗಳನ್ನು ಮುಚ್ಚಿ ಮಾನವರೆಲ್ಲ ಒಂದೇ ಎಂಬ ಮಾತನ್ನು ಗಟ್ಟಿದನಿಯಲ್ಲಿ ಹೇಳಿ ಬ್ರಾಹ್ಮಣ-ದಲಿತರ ಮಧ್ಯೆ ವಿವಾಹ ನಡೆಸುವವರ ಮಟ್ಟಿಗಿನ ಕ್ರಾಂತಿಕಾರಕ ಹೆಜ್ಜೆಯನ್ನಿಟ್ಟು ಬಸವಣ್ಣನವರು ಜಾತ್ಯಾಧಾರಿತ ಸಮಾಜ ಸಂರಚನೆಯ ವಿರುದ್ಧ ಕಹಳೆಯನ್ನು ಮೊಳಗಿಸಿದ ಅಪ್ರತಿಮ ಬಂಡಾಯಗಾರರು. ಜಾತಿಯ ಕಟ್ಟುಪಾಡುಗಳನ್ನು ಕಿತ್ತೊಗೆದು ಮನುಷ್ಯನಿಗೆ ಮತ್ತು ಮಾನವೀಯ ವ್ಯವಹಾರಗಳಿಗೆ ಒತ್ತು ಕೊಟ್ಟ ಬಸವಣ್ಣನವರು ಭಾರತೀಯ ಇತಿಹಾಸ ಕಂಡ ಅಪೂರ್ವ ಮಾನವತಾವಾದಿಗಳು. ಅವರು ಜಾತಿಯನ್ನು ನಿರಾಕರಿಸಿದರು. ಜಡ್ಡುಗಟ್ಟಿದ ಮೌಲ್ಯಗಳನ್ನು ಪ್ರಶ್ನಿಸಿದರು. ಕಂದಾಚಾರಗಳ, ಮೌಢ್ಯಗಳ ಬೇರುಗಳನ್ನು ಅಲುಗಾಡಿಸಿದರು. ಅದರಲ್ಲೂ ವಿಶೇಷವಾಗಿ ಸಮಾಜದಲ್ಲಿ ಹೆಣ್ಣಿಗೂ, ಪುರುಷನಿಗೆ ಸರಿಸಮನಾದ ಸ್ಥಾನವನ್ನು ನೀಡಿ ಸಾಮಾಜಿಕ ಆರ್ಥಿಕ ಕ್ಷೇತ್ರದಲ್ಲಿ ಆಕೆಗೆ ಗೌರವ ಗರಿಮೆಗಳನ್ನು ತಂದುಕೊಟ್ಟರು. ಅವಳಲ್ಲಿ ಅಭಿಮಾನ ಕೆಚ್ಚು-ಅಹಮಿಕೆಯನ್ನು ಮೂಡಿಸಿದರು. ಬಸವಣ್ಣನವರ ವ್ಯಕ್ತಿತ್ವದ ಮಹತ್ವದ ಆಯಾಮವೆಂದರೆ ಅವರ ಅನುಭಾವದ ಬದುಕು ಸಾಮಾಜಿಕವಾಗಿ ಸುತ್ತಲಿನ ಜೀವನವನ್ನು ತಮ್ಮ ವೈಚಾರಿಕ ಚಿಂತನೆಯಿಂದ ಜಾಗೃತಗೊಳಿಸಿದವರು. ಅಂತೆಯೇ ಅವರ ಆಧ್ಯಾತ್ಮ ಬದುಕು ಸಹ ಮಹೋನ್ನತವಾದುದು. ಸಾಧನೆಯ ಔನ್ನತ್ಯ ಸ್ಥಿತಿಯನ್ನು ತಲುಪಿ ಪರತತ್ವದಲ್ಲಿ ವಿಲಯನಗೊಂಡು ಆ ಐಕ್ಯಸ್ಥಿತಿಯಲ್ಲಿ ಪರಮ ಸುಖವನ್ನು ಪಡೆದರು.

**ಆಕರ ಗ್ರಂಥಗಳು :**


1. ವಿಶ್ವ ಚಿಂತಕರು – ಪ್ರೊ. ಸಿ. ಯಂ. ವೀರಭದ್ರಯ್ಯ
2. ಬುದ್ಧ ಭಗವಾನ – ಎಚ್. ಗಂಗಾಧರನ್
3. ಬಸವಣ್ಣ ಮತ್ತು ಗುರುನಾನಕ – ಡಾ. ಶಿವಸ್ವಾಮಿ
4. ಶರಣ ಬಸವರ ಭಾಷಣಗಳು – ಪ್ರೊ. ಎಸ್. ಎಸ್. ಅರಿ
5. ಮುಕ್ತಿ ಕಲ್ಯಾಣ – ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ
6. ವಚನ ಸಾಹಿತ್ಯ – ಡಾ. ಪಿ. ವಿ. ನಾರಾಯಣ
7. ಜಗಜ್ಯೋತಿ ಬಸವೇಶ್ವರ – ಶ್ರೀ ಎಸ್. ಕೆ. ಹೋಳೆಯಣ್ಣವರ
8. ಕ್ರಾಂತಿಕಾರಕ ಡಾ. ಬಿ. ಆರ್. ಅಂಬೇಡ್ಕರ – ದೇಜವರೇಗೌಡ